# KARNATAKA ICSE SCHOOLS ASSOCIATION

## ICSE STD.X Preparatory Examination 2025

**Subject: II Language Kannada**

**Duration: 3Hrs.** **Date: .01.2025**

This paper comprises of two Sections: **Section A and Section B.**
Attempt all the questions from **Section A.** Attempt **four** questions from **Section B,**
answering at least **one** question Each from the **two** books you have studied
and **any two** other questions from the same books that you have compulsorily chosen.
The intended marks for questions or parts of questions are given in brackets [ ]

**Section -A (40 Marks)**
Attempt **all** Questions

**Questions 1**

Write a short composition in kannada of approximately 250 words on any one of the following topics:

**ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ನಿಮಗೆ ಬೇಕಾದ ಒಂದು ವಿಷಯವನ್ನು ಆರಿಸಿಕೊಂಡು ಸುಮಾರು ೨೫೦ ಪದಗಳ ಸಂಕ್ಷಿಪ್ತ ಪ್ರಬಂಧ ಬರೆಯಿರಿ.** **[15]**

1. 'ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ' ಈ ಗಾದೆ ಮಾತಿನ ಅರ್ಥವನ್ನು ವಿವರಿಸಿ, ಈ ಗಾದೆ ಮಾತನ್ನು ಆಧರಿಸಿ ಒಂದು ಕಥೆಯನ್ನು ಬರೆಯಿರಿ.
2. "ಮಾನವನ ನಿಜವಾದ ಸಂಪತ್ತು ಎಂದರೆ ಅದು ಆರೋಗ್ಯ", ದೈನಂದಿನ ಜೀವನದಲ್ಲಿ ಆರೋಗ್ಯಕ್ಕೆ ಬಹಳ ಮುಖ್ಯವಾದ ಸ್ಥಾನವಿದೆ ಎನ್ನುವುದಾದರೆ ಆರೋಗ್ಯದ ಅರ್ಥ, ಮಹತ್ವ ಮತ್ತು ಮುಂಜಾಗ್ರತಾ ಕ್ರಮಗಳನ್ನು ವನ್ನು ಕುರಿತು ಪ್ರಬಂಧ ಬರೆಯಿರಿ.
3. 'ಇಂದಿನ ಮಕ್ಕಳ ಉತ್ತಮವಾದ ಭವಿಷ್ಯ ನಿರ್ಮಾಣದಲ್ಲಿ ಪೋಷಕರ ಹಾಗೂ ಶಿಕ್ಷಕರ ಪಾತ್ರ ಬಹಳ ಮುಖ್ಯವಾದದ್ದು–ಈ ವಿಚಾರವಾಗಿ ಪೋಷಕರ ಹಾಗೂ ಶಿಕ್ಷಕರ ಜವಾಬ್ದಾರಿಗಳನ್ನು ಕುರಿತು ವಿವರಿಸಿ.
4. ಆಧುನಿಕ ಪ್ರಪಂಚದಲ್ಲಿ ಮೊಬೈಲ್ ಬಳಕೆ ಅನಿವಾರ್ಯ ಎನ್ನುವುದಾದರೆ ಮೊಬೈಲ್‌ಗಳಿಂದ ನಮಗಾಗುವ ಅನುಕೂಲ ಮತ್ತು ಅನಾನುಕೂಲಗಳೇನು ಎಂಬುದನ್ನು ಕುರಿತು ಪ್ರಬಂಧ ಬರೆಯಿರಿ.
5. ಕೆಳಗೆ ಕೊಟ್ಟಿರುವ ಚಿತ್ರವನ್ನು ಜಾಗರೂಕರಾಗಿ ಅಧ್ಯಯನ ಮಾಡಿ, ಈ ಚಿತ್ರವನ್ನು ಆಧರಿಸಿ ಒಂದು ಕಥೆಯೊಂದಿಗೆ ಅಥವಾ ಪ್ರಸಂಗವನ್ನು ಬರೆಯಿರಿ ಚಿತ್ರಕ್ಕೂ ನಿಮ್ಮ ವರ್ಣನೆಗೂ ಸ್ಪಷ್ಟವಾದ ಸಂಬಂಧವಿರಬೇಕು.



**Questions 2**

**Write a letter in kannada of approximately 120 words on any one of the following topics:**

**ಕೆಳಗೆ ಕೊಟ್ಟಿರುವ ವಿಷಯುಗಳಲ್ಲಿ ನಿಮಗೆ ಬೇಕಾದ ಒಂದು ವಿಷಯುವನ್ನು ಆರಿಸಿಕೊಂಡು ಸುಮಾರು ೧೨೦ ಪದಗಳಲ್ಲಿ ಒಂದು ಪತ್ರವನ್ನು ಬರೆಯಿರಿ.** **[7]**

1. ನಿಮ್ಮ ಶಾಲೆಯಲ್ಲಿ ಆಚರಿಸುವ ವೈಭವದ ಗಣರಾಜ್ಯೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸುವಂತೆ ವಿನಂತಿಸಿ ನಿಮ್ಮ ನಗರದ ಪೋಲೀಸ್ ಆಯುಕ್ತರಿಗೊಂದು ಪತ್ರ ಬರೆಯಿರಿ.
2. ನಿಮ್ಮ ತಂದೆಯವರ ಹುಟ್ಟುಹಬ್ಬವನ್ನು ಆಚರಿಸಲು ಅವರಿಗರಿವಿಲ್ಲದಂತೆ ಯಾವ ರೀತಿಯ ತಯಾರಿ ಮಾಡಿಕೊಂಡಿದ್ದೀರಿ? ಹೇಗೆ ಆಚರಿಸುತ್ತೀರಿ ಎಂಬುದನ್ನು ವಿವರಿಸಿ ಆ ಸಮಾರಂಭಕ್ಕೆ ಆಗಮಿಸುವಂತೆ ಆಹ್ವಾನಿಸಿ ನಿಮ್ಮ ಗೆಳೆಯನಿಗೊಂದು ಪತ್ರ ಬರೆಯಿರಿ.

**Questions 3**

**Read the following passage carefully and answer in kannada the questions that follow:**

**ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **[10]**

ವಿನೋಬಾ ಭಾವೆಯವರ ಹೆಸರನ್ನು ಕೇಳದ ಭಾರತೀಯನಿಲ್ಲ. ಅವರನ್ನು ಜನರು ಪ್ರೀತಿ ವಿಶ್ವಾಸಗಳಿಂದ 'ವಿನೋಬಾಜಿ' ಎಂದು ಕರೆಯುತ್ತಿದ್ದರು. ಗಾಂಧೀಜಿಯವರ ಮಾರ್ಗವನ್ನು ಮುಂದುವರಿಸುತ್ತಿರುವ ವಿನೋಬಾ ಶಾಂತಿ, ಅಹಿಂಸೆ, ಸರ್ವೋದಯಗಳ ಪ್ರತಿಪಾದಕರು. ಅವರೇ ಭೂದಾನ, ಗ್ರಾಮದಾನ ಚಳವಳಿಗಳನ್ನು ಪ್ರಾರಂಭಿಸಿದರು. ಗ್ರಾಮವೇ ನಮ್ಮ ಜೀವಾಳವೆಂದು ಸಾರಿದರು.

ವಿನೋಬಾಜಿಯವರ ಮೇರೆಗೆ ಗ್ರಾಮದ ಏಳಿಗೆಗೆ ಗ್ರಾಮಧರ್ಮ ಎಂಬುದಿದೆ. ಒಂದು ಕುಟುಂಬದ ಏಳಿಗೆಗಾಗಿ ಜಾತಿ ಧರ್ಮವಿರುವುದೋ ಹಾಗೆ, ಒಂದು ಗ್ರಾಮದ ಏಳಿಗೆಗಾಗಿ ಗ್ರಾಮಧರ್ಮವಿದೆ. ಈ ಗ್ರಾಮ ಧರ್ಮವನ್ನು ಪಾಲಿಸಿದರೆ ಮಾತ್ರ ನಮ್ಮ ಉದ್ಧಾರ ಸಾಧ್ಯ. ಹಾಗಿದ್ದರೆ, ಈ ಗ್ರಾಮಧರ್ಮ ಎಂದರೇನು? ಅದರ ಹಲವು ಲಕ್ಷಣಗಳನ್ನು ನೋಡೋಣ.

ವಿನೋಬಾಜಿಯವರ ಮೇರೆಗೆ ಗ್ರಾಮ ಧರ್ಮವೆಂದರೆ ಪ್ರಾಮುಖ್ಯವಾಗಿ ಗ್ರಾಮದ ಒಗ್ಗಟ್ಟು, ಗ್ರಾಮದ ಸಹಕಾರ, ಉಳುವಾಗ, ಬೀಜ ಬಿತ್ತುವಾಗ, ಬೆಳೆ ಕೊಯ್ಯುವಾಗ ಗ್ರಾಮದ ಜನರೆಲ್ಲ ಪರಸ್ಪರ ನೇರವಾಗಿ ಸಹಕಾರದಿಂದ ದುಡಿಯಬೇಕು. ಅವರು ಇತರರ ಕಷ್ಟಗಳಲ್ಲಿ ಪಾಲ್ಗೊಳ್ಳಬೇಕು. ಅವರ ಸುಖದಲ್ಲಿ ಪಾಲ್ಗೊಳ್ಳಬೇಕು. ಅವರ ಸುಖದಲ್ಲಿ ಸಂತೋಷ ಪಡಬೇಕು. ದುಃಖಕ್ಕಾಗಿ ಮರುಗಬೇಕು.

ಇದೂ ಅಲ್ಲದೆ, ವಿನೋಬಾಜಿಯವರು ತಮ್ಮ ಸರ್ವೋದಯ ತತ್ವವನ್ನು ಸಾರಿದರು. ಈ ತತ್ವದ ಮೇರೆಗೆ ಪ್ರತಿಯೊಂದು ಗ್ರಾಮವೂ ಸ್ವಯಂಪೂರ್ಣ ಘಟಕವಾಗಬೇಕು. ಹಳ್ಳಿಗಳಲ್ಲಿನ ಜಗಳಗಳು ಹಳ್ಳಿಯಲ್ಲಿಯೇ ತೀರ್ಮಾನವಾಗಬೇಕು. ಈ ಜಗಳ ತಂಟೆಗಳಿಲ್ಲದಿದ್ದರೆ, ಒಳ್ಳೆಯದೇನೋ ನಿಜ; ಆದರೆ ಅನೇಕ ಜನರು ಒಂದೆಡೆ ವಾಸಮಾಡಿದಾಗ, ವಿವಾದಗಳೇಳುವುದು ಸ್ವಾಭಾವಿಕ. ಇಂಥ ವಿವಾದಗಳನ್ನು ನಗರದ ಕಛೇರಿಗಳಿಗೆ ಒಯ್ಯದೆ, ಅವು ಸ್ಥಳೀಯ ಹಿರಿಯರ ಸಹಾಯದಿಂದ ಗ್ರಾಮಗಳಲ್ಲಿಯೇ ನಿರ್ಣಿತವಾಗಬೇಕು.

ಹಳ್ಳಿಗಳಲ್ಲಿ ಜ್ವರ, ವಾಂತಿ ಇತ್ಯಾದಿ ರೋಗಗಳಿಂದ, ಜನರು ಬಳಲಿದಾಗ, ಅವರಿಗೆ ಅಲ್ಲಿಯೇ ಚಿಕಿತ್ಸೆ ದೊರೆಯಬೇಕು. ಬಡವರು ಶ್ರೀಮಂತರೆನ್ನದೆ ಹಳ್ಳಿಗಳಲ್ಲಿಯೇ ಅವರಿಗೆ ವೈದಕೀಯ ಚಿಕಿತ್ಸೆ ದೊರೆಯಬೇಕು. ಅದೂ ಅಲ್ಲದೆ ಹಳ್ಳಿಯ ಎಲ್ಲ ಮಕ್ಕಳಿಗೂ ಉಚಿತ ವಿದ್ಯಾಭ್ಯಾಸದ ಅನುಕೂಲತೆ ಒದಗಬೇಕು. ಬಡವರ ಮಕ್ಕಳು ವಿದ್ಯೆಯಿಲ್ಲದೆ, ಅಲೆಯುವಂತಾಗಬಾರದು. ಪ್ರತಿದಿನ ಈ ಮಕ್ಕಳು ಎರಡು ಗಂಟೆ ಕಾಲ ಓದುಬರಹ ಕಲಿತರೆ ಸಾಕು. ಉಳಿದ ವೇಳೆಯಲ್ಲಿ ಅವರು ಕೆಲಸ ಮಾಡಬಹುದು.

ಬೇಸಾಯದ ಬಗ್ಗೆಯೂ ವಿನೋಬಾ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವಿನೋಬಾ ಮೇರೆಗೆ ಬೇಸಾಯವೆಂದರೆ ಭೂಮಿಯ ಸೇವೆ. ಭೂಮಿಯೆಲ್ಲ ದೇವರಿಗೆ ಸೇರಿದ್ದು. ನಾವೆಲ್ಲಾ ಭೂಮಿಯ ಸೇವಕರೆಂಬ ಭಾವನೆಯಿಂದ ನಾವು ಕೆಲಸ ಮಾಡಬೇಕು. ಹೊಲಗದ್ದೆಗಳನ್ನು ನಮ್ಮಲ್ಲಿಯೇ ಹಂಚಿಕೊಂಡರೂ, ಅವೆಲ್ಲ ಇಡೀ ಗ್ರಾಮಕ್ಕೇ ಸೇರಿದವೆಂಬುದನ್ನು ಮರೆಯಬಾರದು. ಬೆಳೆಯನ್ನು ಹಾಳುಮಾಡದೆ, ಭೂಮಿಯ ಉತ್ಪನ್ನವನ್ನು ಹೆಚ್ಚಿಸಲು ಯತ್ನಿಸಬೇಕು.

ಗ್ರಾಮಗಳೆಲ್ಲಾ ಸ್ವಾವಲಂಭಿಗಳಾಗಿರಬೇಕು. ಹಳ್ಳಿಗಳಿಗೆ ಬೇಕಾದ ವಸ್ತುಗಳನ್ನೆಲ್ಲಾ ಹಳ್ಳಿಗಳಲ್ಲಿಯೇ ತಯಾರಿಸಬೇಕು. ಗ್ರಾಮದ ಕೈಕಸುಬುಗಳನ್ನೆಲ್ಲಾ ಪ್ರೋತ್ಸಾಹಿಸಬೇಕು. ಇಂಥ ಗ್ರಾಮ ರಾಜ್ಯವೇ ನಿಜವಾದ ಸ್ವರಾಜ್ಯ. ಈ ಸ್ವರಾಜ್ಯವನ್ನು ಪಡೆಯುವ ಹೋರಾಟದಲ್ಲಿ ನೂಲುವ ಚರಕ, ಉಳುವ ನೇಗಿಲು ಉತ್ತಮ ಆಯುಧಗಳಾಗಿವೆ.

**ಪ್ರಶ್ನೆಗಳು :**

i) ಸರ್ವೋದಯದ ಪ್ರತಿಪಾದಕರು ಯಾರು? ಜನರು ಅವರನ್ನು ಏನೆಂದು ಕರೆಯುತ್ತಿದ್ದರು? ಅವರು ಪ್ರಾರಂಭಿಸಿದ ಚಳವಳಿಯು ಯಾವುದು? **[2]**

ii) ಗ್ರಾಮ ಧರ್ಮದ ಹಲವು ಲಕ್ಷಣಗಳನ್ನು ತಿಳಿಸಿ. **[2]**

iii) ಗ್ರಾಮದ ಹಿರಿಯರು ಕೈಗೊಳ್ಳುವ ನಿರ್ಣಯಗಳೇನು? **[2]**

iv) ಹಳ್ಳಿಗರಿಗೆ ವೈದ್ಯಕೀಯ ಚಿಕಿತ್ಸೆ ಹಾಗೂ ಮಕ್ಕಳ ವಿದ್ಯಾಭ್ಯಾಸದ ಕುರಿತು ವಿನೋಬಾರ ಚಿಂತನೆಗಳೇನು? **[2]**

v) ಬೇಸಾಯ ಮತ್ತು ಸ್ವಾವಲಂಭಿ ಗ್ರಾಮದ ಬಗ್ಗೆ ವಿನೋಬಾರ ಅಭಿಪ್ರಾಯಗಳೇನು? **[2]**

## Questions 4

**ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **[8]**

1. 'ಆಗಮನ' – ಈ ಪದದ ವಿರುದ್ಧ ಪದ.

ಅ) ಅನಾಗಮನ ಆ) ನಿಯಾಗಮನ ಇ) ನಿರ್ಗಮನ ಈ) ಅಪಾಗಮನ

2. 'ಸಾಧಕಿ' – ಈ ಪದದ ಬಹುವಚನ ರೂಪ.

ಅ)ಸಾಧಕರು ಆ) ಸಾಧಕರುಗಳು ಇ) ಸಾಧಕಿಯರು ಈ) ಸಾಧಕಿಗಳು

3. ಸೂಕ್ತ ವಿಭಕ್ತಿ ಪ್ರತ್ಯಯಗಳನ್ನು ಆರಿಸಿ ವಾಕ್ಯವನ್ನು ಪೂರ್ಣಗೊಳಿಸಿ.

ಗುರುಗಳು ತರಗತಿ___ಮಕ್ಕಳಿಗೆ ಕನ್ನಡ ಪಾಠ___ಮಾಡುತ್ತಿದ್ದಾರೆ.

ಅ) ಯಲ್ಲಿ, ವನ್ನು ಆ) ಗೆ, ಯಿದ ಇ) ಗೆ, ವನ್ನು ಈ) ಯಲ್ಲಿ. ಕ್ಕೆ

4. ಶಿಕ್ಷಕಿಯು ವಿದ್ಯಾರ್ಥಿನಿಗೆ ಪ್ರಬಂಧ ಬರೆಯಲು <u>ಹೇಳುವರು</u>_ ಈ ಪದದಲ್ಲಿ ಅಡಿಗೆರೆ ಎಳೆದ ಪದದ ಕಾಲವನ್ನು ಗುರುತಿಸಿ.

ಅ) ಭೂತ ಕಾಲ ಆ) ಭವಿಷ್ಯತ್ ಕಾಲ ಇ) ವರ್ತಮಾನ ಕಾಲ ಈ) ಅಪೂರ್ಣ ವರ್ತಮಾನ

5. 'ಕೋಲಾಹಲ' ಪದದ ಸಮಾನಾರ್ಥಕ ಪದ.

ಅ) ಗಲಾಟೆ ಆ) ಪ್ರವಾಹ ಇ) ಸಮರ ಈ) ತಿರುಗಾಟ

6. 'ಒಬ್ಬಳು' _ಈ ಪದದ ಅನ್ಯ ಲಿಂಗ ರೂಪ.

ಅ) ಒಬ್ಬರು ಆ) ಒಬ್ಬಿಬ್ಬರು ಇ) ಒಬ್ಬೊಬ್ಬಳು ಈ) ಒಬ್ಬನು

7. 'ಅಡಿಕೆಗೆ ಹೋದ ಮಾನ ______' ಈ ಗಾದೆ ಮಾತನ್ನು ಪೂರ್ಣಗೊಳಿಸಿ.

ಅ) ಹಣ ಕೊಟ್ಟರೂ ಬಾರದು ಆ) ಅರಿವೆ ಕೊಟ್ಟರೂ ಬಾರದು

ಇ) ಕನಕ ಕೊಟ್ಟರೂ ಬಾರದು ಈ) ಆನೆ ಕೊಟ್ಟರೂ ಬಾರದು

8. ಸರಿಯಾದ ವಾಕ್ಯವನ್ನು ಗುರುತಿಸಿ.

ಅ) ನಾನು ಹೊತ್ತಿನಿಂದ ನಿಮಗಾಗಿ ಬಹಳ ಕಾಯುತ್ತಿದ್ದೇನೆ.

ಆ) ಬಹಳ ಹೊತ್ತಿನಿಂದ ನಿಮಗಾಗಿ ಕಾಯುತ್ತಿದ್ದೇನೆ ನಾನು.

ಇ) ನಾನು ಬಹಳ ಹೊತ್ತಿನಿಂದ ನಿಮಗಾಗಿ ಕಾಯುತ್ತಿದ್ದೇನೆ.

ಈ) ನಾನು ಕಾಯುತ್ತಿದ್ದೇನೆ ಬಹಳ ಹೊತ್ತಿನಿಂದ ನಿಮಗಾಗಿ.

## SECTION –B (40 Marks )

Questions from only two of the following textbooks are to be answered.
Attempt four questions from this section.
You must answer at least one question from each of the two books you have studied and any two other questions from the books that you have chosen.

### ಸಾಹಿತ್ಯ ಸಂಗಮ – ಸಣ್ಣ ಕಥೆಗಳು

### SAHITYA SANGAMA – SHORT STORIES

**Question 5**

Read the extract given below and answer in **Kannada** the questions that follow :-
**ಕೆಳಗೆ ಕೊಟ್ಟಿರುವ ಗಧ್ಯ ಭಾಗವನ್ನು ಓದಿ, ಅನಂತರ ಕೇಳಲಾದ ಪ್ರಶ್ನೆಗಳಿಗೆ ಕನ್ನಡದಲ್ಲಿ ಉತ್ತರಿಸಿ.**

**ಪಾರಿವಾಳಗಳೆರಡೂ ಕರಕರ ಸದ್ದು ಮಾಡುತ್ತಾ ಗೂಡಿನಿಂದ ಹೊರ ಬಂದವು. ಮರದ ಗಿಲ್ಲಿನಿಂದ ಗಿಲ್ಲಿಗೆ ಹಾರುತ್ತಾ ನೋಡಿದವು.... [ತಾಳ್ಮೆಗೆ ಒಲಿದ ಅದೃಷ್ಟ]**

**ಪ್ರಶ್ನೆಗಳು:**

1. ಪಾರಿವಾಳಗಳು ಎಲ್ಲಿ ಮತ್ತು ಹೇಗೆ ಜೀವನ ಸಾಗಿಸುತ್ತಿದ್ದವು? **[2]**
2. "ಅತ್ತ ದರಿ ಇತ್ತ ಪುಲಿ" ಎಂದು ಯಾರು ಯಾರಿಗೆ ಹೇಳಿದರು? ಸಂದರ್ಭವೇನು? ವಿವರಿಸಿ. **[2]**
3. ಈ ಪಾಠದ ಲೇಖಕಿಯನ್ನು ಪರಿಚಯ ಮಾಡಿಕೊಡಿ. **[3]**
4. ಬೇಟೆಗಾರ ಮತ್ತು ಗಿಡುಗ ಅಂತ್ಯ ಕಂಡ ಬಗೆಯನ್ನು ವಿವರಿಸಿ. **[3]**

**Question 6**

**ನಾನು ಮೂರು ಘಂಟೆಯ ರೈಲಿಗೆ ಗರುಡಗಂಬವನ್ನು ಕೈಯಲ್ಲಿ ಹಿಡಿದುಕೊಂಡು ಮಲ್ಲೇಶ್ವರದಿಂದ ಹೊರಟೆ. ನಾನು ಕೃಷ್ಣ ಬಜಾರಿನ ಮುಂದೆ ಬಂದಾಗ ಎಲ್ಲರೂ ನನ್ನ ಕಡೆಯೇ ನೋಡುತ್ತಿರುವಂತೆ ತೋರಿತು...... [ಗರುಡಗಂಬದ ದಾಸಯ್ಯ]**

**ಪ್ರಶ್ನೆಗಳು:**

1. ಲೇಖಕರಿಗೆ ಗರುಡಗಂಬ ಸಿಕ್ಕಿದ್ದು ಹೇಗೆ? ವಿವರಿಸಿ. **[2]**
2. ಲೇಖಕರ ಆಗಿನ ವೇಷಭೂಷಣ ಹೇಗಿತ್ತು? ಅದರಿಂದ ಅವರು ಯಾವ ಪಜೀತಿಗೆ ಸಿಲುಕಿಕೊಂಡರು? **[2]**
3. ಲೇಖಕರು ಸ್ನೇಹಿತನ ಕೊಠಡಿಯಲ್ಲಿ ಮಂಕನಂತೆ ಸುಮ್ಮನಿರಲು ಕಾರಣವೇನು? **[3]**
4. "ಅದ್ಯಾರೋ ದಾಸಯ್ಯ ಟಿಕೆಟ್ಟಿಲ್ಲದೆ ಆ ಕಡೆಯಿಂದ ಓಡ್ತಿರೋನು?"- ಈಮಾತನ್ನು ಹೇಳಿದವರು ಯಾರು? ಸಂದರ್ಭವನ್ನು ವಿವರಿಸಿ. **[3]**

**Question 7**

**ಮಂಜಣ್ಣನೆಂದರೆ ನಮಗೆಲ್ಲಾ ಪ್ರಾಣ; ಏಕೆಂದರೆ ನಮಗೆಲ್ಲಾ ಅವನೇ ಕಥೆಗಾರ! ಆ ವೃದ್ಧ ಮೂರ್ತಿಯನ್ನು ನೋಡಿದಾಗ ಹುಡುಗರಾದ ನಮಗೆ ಅವನಲ್ಲಿ ಗುರುಭಾವ ಉಂಟಾಗುತ್ತಿತ್ತು....... [ಕಥೆಗಾರ ಮಂಜಣ್ಣ]**

**ಪ್ರಶ್ನೆಗಳು:**

1. ಮಂಜಣ್ಣ ಯಾರು? ಅವನ ರೂಪ ಹೇಗಿತ್ತು? [2]
2. ಮಂಜಣ್ಣನ ಕರ್ಮಾಚರಣೆಗಳು ಹೇಗಿದ್ದವು? ವಿವರಿಸಿ. [2]
3. ಚಳಿ ಕಾಯಿಸುತ್ತಾ ಕುಳಿತ ಹುಡುಗರ ನಡುವೆ ಮಂಜಣ್ಣ ಹೇಗೆ ಜಾಗ ಮಾಡಿಕೊಂಡು ಕುಳಿತುಕೊಳ್ಳುತ್ತಿದ್ದ? ಲೇಖಕರಿಗೆ ಮತ್ತು ಕಿಟ್ಟುವಿಗೆ ಅವಮಾನವಾದಂತಾಗಲು ಕಾರಣವೇನು? [3]
4. ಲೇಖಕರಾದ ಕುವೆಂಪು ಅವರ ಬಾಲ್ಯದ ಮೋಕ್ಷ ದರ್ಶನದ ಚಿತ್ರವನ್ನು ವರ್ಣಿಸಿ. [3]

## ಸಾಹಿತ್ಯ ಸಂಗಮ – ಕವನಗಳು

## SAHITYA SANGAMA – POEMS

**Question 8**

**[ಬಕಾಸುರನ ವಧೆ]**

**ಪೌರ ಜನವೈತರಲು ಬಂಡಿಯ**
**ನೂರ ಹೊರವಂಡಿಸಿದನೆಲ್ಲರು**
**ದೂರದಲ್ಲಿರಿ ಸಾವವನೆ ತಾ ಸಾಕು ದೈತ್ಯನಲಿ. . . . . . . .**

**ಪ್ರಶ್ನೆಗಳು:**

1. ಭೀಮನು ದಾರಿಯುದ್ದಕ್ಕೂ ಏನು ಮಾಡಿದನು? [2]
2. ಭೀಮನು ರಾಕ್ಷಸನ ಬಳಿಗೆ ಹೊರಟ ದೃಶ್ಯವನ್ನು ವರ್ಣಿಸಿ. [2]
3. "ಎಲವೋ ಕುನ್ನಿ ಕೂಳಿದೆ ತಿನ್ನು ಬಾ"– ಸಂದರ್ಭದೊಡನೆ ವಿವರಿಸಿ. [3]
4. ಬ್ರಾಹ್ಮಣರ ಕುಟುಂಬಕ್ಕೆ ಬಂದ ಆಪತ್ತು ಏನು? ಅದಕ್ಕೆ ಯಾರು, ಹೇಗೆ ಪರಿಹಾರ ಸೂಚಿಸಿದರು? [3]

**Question 9**

**ಅನ್ಯರಲಿ ಜನಿಸಿರ್ದ ಅಂಗನೆಯ ಕರೆತಂದು**
**ತನ್ನ ಮನೆಗವಳ ಯಜಮಾನಿಯೆನಿಸಿ**
**ಭಿನ್ನವಿಲ್ಲದ ಅರ್ಧ ದೇಹವೆನಿಸುವ ಸತಿಯು**
**ಕಣ್ಣಿನಲಿ ನೋಡಲಮ್ಮಳು ಕಾಲನೊಯ್ವಾಗ [ಆರು ಹಿತವರು ನಿನಗೆ]**

**ಪ್ರಶ್ನೆಗಳು:**

1. ಪುರಂದರ ದಾಸರು ಈ ಧಾರುಣಿಯ ವ್ಯಾಮೋಹವನ್ನು ಕುರಿತು ಹೇಳಿರುವುದೇನು? [2]
2. ದಾಸರು ನಾರಿಯ ವ್ಯಾಮೋಹದ ಬಗ್ಗೆ ಏನೆಂದು ಹೇಳಿದ್ದಾರೆ? [2]
3. ಮಾನವ ಯಾವ ಯಾವ ರೀತಿಯಲ್ಲಿ ಸಂಪತ್ತನ್ನು ಸಂಪಾದಿಸುತ್ತಾನೆ? ಕೊನೆಗೆ ಏನಾಗುವುದು? [3]
4. ಈ ಕೀರ್ತನೆಯ ಮೂಲಕ ಪುರಂದರದಾಸರು ಮಾನವರಿಗೆ ನೀಡಿರುವ ಸಂದೇಶವೇನು? [3]

**Question 10**

**ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ**
**ಬೀದಿಬೀದಿಯನಲೆದು ನೋಡಬೇಕು**
**ಅಲ್ಲಿ ಎಲ್ಲಾದರೂ ಮರದ ನೆರಳಿಗೆ ಕುಳಿತು**
**ರಾಮಭದ್ರನ ಮಹಿಮೆ ಹಾಡಬೇಕು** **[ ಮಿಥಿಲೆ]**

**ಪ್ರಶ್ನೆಗಳು:**

1. ರಾಮಭದ್ರನನ್ನು ಬಿಲ್ಲನೆತ್ತುವ ದಿನ ಹೇಗೆ ಬರಮಾಡಿಕೊಂಡರು? ವಿವರಿಸಿ. **[2]**
2. ಮಿಥಿಲಾ ನಗರವನ್ನು ಕವಿ ಹೇಗೆ ವರ್ಣಿಸಿದ್ದಾರೆ? ವಿವರಿಸಿ. **[2]**
3. ಮಿಥಿಲೆಯ ಮಣ್ಣಿನ ಕಣಕಣಗಳಲ್ಲಿ ಮೂಡಿರುವ ಚಿತ್ರಗಳನ್ನು ಈ ಕವಿತೆಯಲ್ಲಿ ಹೇಗೆ ವರ್ಣಿಸಲಾಗಿದೆ? **[3]**
4. ಜನಕ ತನ್ನ ಮಗಳು ಸೀತೆಯನ್ನು ಬೀಳ್ಕೊಟ್ಟ ದೃಶ್ಯವನ್ನು ವರ್ಣಿಸಿ. **[3]**

## ಕಾದಂಬರಿ – ನಾಟ್ಯಮಯೂರಿ
## NOVEL – NATYA MAYURI

**Question 11**

**ನಮ್ಮ ಮಾರಸಿಂಗಮಯ್ಯನವರು ಅಲ್ಲೇ ಹುಟ್ಟಿ ಬೆಳೆದು ವಿದ್ಯಾವಂತರಾಗಿ ನಿಮ್ಮ ಪೂಜ್ಯ ತಂದೆ ಶ್ರೀ ಎರೆಯಂಗರ ದೃಷ್ಟಿಗೆ ಬಿದ್ದು ಅಲ್ಲೇ ಪೆರ್ಗಡೆಯಾಗಿ ನಿಯಾಮಿತರಾದವರು......** **[ಅಧ್ಯಾಯ-3]**

**ಪ್ರಶ್ನೆಗಳು:**

1. ಬಪ್ಪರಸ ದಣಾಯಕ ಮಾರಸಿಂಗಮಯ್ಯನವರ ಕುರಿತು ವಿಷ್ಣುವರ್ಧನನಿಗೆ ತಿಳಿಸಿದ ವಿಚಾರವೇನು? **[2]**
2. ಬಳ್ಳಿಗಾವಿ 'ಸರ್ವಧರ್ಮಗಳ ಸಮನ್ವಯ ಭೂಮಿಯಾಗಿದೆ'- ಸ್ಪಷ್ಟೀಕರಿಸಿ. **[2]**
3. ಶಾಂತಲೆಯ ಜನನದ ಬಗೆಗೆ ಬಪ್ಪರಸನು ವಿಷ್ಣುವರ್ಧನನಿಗೆ ನೀಡಿದ ವಿವರಗಳಾವುವು? **[3]**
4. ವಿಷ್ಣುವರ್ಧನನ ಮದುವೆಯ ವಿಚಾರದಲ್ಲಿ ಏಚಲಾದೇವಿ ವ್ಯಕ್ತಪಡಿಸಿದ ಅಭಿಪ್ರಾಯಗಳೇನು? **[3]**

**Question 12**

**ವಿವಾಹಕ್ಕೆ ಪೂರ್ವದಲ್ಲಿ ಮೂರು ದಿನಕ್ಕೆ ಮೊದಲೆ ನೆಂಟರಿಷ್ಟರು ಅರಮನೆಯನ್ನು ಸೇರಿದ್ದರು. ಆಮಂತ್ರಣವನ್ನು ಕಂಡ ಕೂಡಲೆ ರಾಜರು, ಸಾಮಂತರು, ಮಾಂಡಲಿಕರು, ಮನ್ನೆಯರು ತಂಡೋಪ ತಂಡವಾಗಿ ದ್ವಾರಸಮುದ್ರಕ್ಕೆ ಆಗಮಿಸಿ ಯೋಗ್ಯ ಬಿಡಾರಗಳಲ್ಲಿ ತಂಗಿದ್ದರು.......** **[ಅಧ್ಯಾಯ-6]**

**ಪ್ರಶ್ನೆಗಳು:**

1. ರಾಜಧಾನಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಗಳಾವುವು? ಅದಕ್ಕಾಗಿ ದ್ವಾರಸಮುದ್ರವು ಹೇಗೆ ಸಿದ್ಧಗೊಂಡಿತ್ತು? **[2]**
2. "ವಿಶ್ರಾಂತರಾಳದ ¸ಸಮಸ್ತ ಚೈತನ್ಯಗಳೂ ಇದಕ್ಕೆ ಸಾಕ್ಷಿ"- ಈ ಮಾತಿನ ಸಂದರ್ಭ ವನ್ನು ವಿವರಿಸಿ. **[2]**
3. ದ್ವಾರಸಮುದ್ರದಲ್ಲಿ ನಡೆದ ವಿವಾಹ ಮಹೋತ್ಸವವನ್ನು ಕುರಿತು ಬರೆಯಿರಿ.? **[3]**
4. ದ್ವಾರಸಮುದ್ರದಲ್ಲಿ ನಡೆದ ಮೂರನೇ ದಿನದ ಕಾರ್ಯಕ್ರಮ ಯಾವುದು? ಅದರ ಸಂಭ್ರಮವನ್ನು ವರ್ಣಿಸಿ. **[3]**

**Question 13**

**ಹಲವರು ತಲಕಾಡನ್ನು ಲೂಟಿ ಮಾಡಬೇಕೆಂದು ಇಚ್ಛಿಸಿದರು. ಆದರೆ ವಿಷ್ಣುವರ್ಧನ ಭೂಪಾಲನು ಅದಕ್ಕೆ ಆಸ್ಪದ ಕೊಡಲಿಲ್ಲ. ......** **[ಅಧ್ಯಾಯ-8]**

**ಪ್ರಶ್ನೆಗಳು:**

1. ವಿಷ್ಣುವರ್ಧನನಿಗೆ 'ತಲಕಾಡುಗೊಂಡ' ಎಂಬ ಹೆಸರು ಬರಲು ಕಾರಣವೇನು? **[2]**
2. ತಲಕಾಡು ಯಾರ ಸ್ವಾಧೀನದಲ್ಲಿತ್ತು? ಅವನು ಹೊಯ್ಸಳರ ಮೇಲೆ ಯುದ್ಧಕ್ಕೆ ಬರಲು ಕಾರಣವೇನು? **[2]**
3. ಬನದಮ್ಮನಹಳ್ಳಿಯಲ್ಲಿ ಪಂಚಾಯಿತಿ ನಡೆಸುತ್ತಿದ್ದವರು ಯಾರು? ಪಂಚಾಯತಿ ಸೇರಲು ಕಾರಣವೇನು? **[3]**
4. ಗಂಡುಡುಗೆಯಲ್ಲಿದ್ದವರು ಶಾಂತಲೆ ಎಂದು ತಿಳಿದ ಬನದಮ್ಮನಹಳ್ಳಿಯ ಜನ ಹೇಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು? **[3]**

## [ನಾಟಕ – ಹೂವಿ]

# DRAMA – HOOVI

**Question 14**

**ಲೇ.... ಲೇ.... ಲೇ.... ಏನಾದ್ರೂ ಮಾಡಿ ಆ ಹೂ ಬಿಡೋ ಗಿಡ ಎಲ್ಲಿದೆ ಹುಡುಕೋಣ ಕಣೇ....**

**ಗಿಡಾ ಗಿಡಾ, ನಿಂಗೆ ಕಟ್ಟೆ ತುಂಬ ನೀರು ಎರೀತೀನಿ.......** **[ದೃಶ್ಯ-3]**

**ಎಲ್ಲಿ ಹೋದ ನಮ್ಮ ಹೊನ್ನೇಗೌಡ.....? ನಮ್ಮ ಬಿಟ್ಟು ಒಂದು ಕ್ಷಣ ಇರದೋನು.....?** **[ದೃಶ್ಯ-5]**

**ಪ್ರಶ್ನೆಗಳು:**

1. ಪುಟ್ಟಿ ಹೂ ಬಿಡುವ ಗಿಡ ಎಲ್ಲಿರಬಹುದೆಂದು ಊಹಿಸುತ್ತಾಳೆ? ಏಕೆ? **[2]**
2. "ನಾನಿರುವಾಗ ಬೇಜಾರು ಆಗೋದು ಅಂದ್ರೆ ಏನು?"-ಸಂದರ್ಭದೊಡನೆ ವಿವರಿಸಿ. **[2]**
3. ಹೂವಿಯ ಅಕ್ಕ ಪುಟ್ಟಿ ಹೂವಿನ ಗಿಡವನ್ನು ಹುಡುಕಿ ತಂದೇ ತರುವೆನೆಂದು ಹೇಳಲು ಕಾರಣವೇನು? **[3]**
4. ಹೂವಿನ ಮರವನ್ನು ಹುಡುಕಲು ಹೊನ್ನನಿಗೆ ಕುದುರೆ ನೀಡಿದ ಉಪಾಯವೇನು? **[3]**

**Question 15**

**ಹಣ್ಣಾದ ಹೂಗಾತಿ**
**ಹೊನ್ನೇ ಗೌಡನ ಮನೆಗೆ**
**ಹೆಣ್ಣಕೊಡಬೇಕಮ್ಮ ತಾಯಿ! ಅಣ್ಣಯ್ಗೆ......** **[ದೃಶ್ಯ-7 ]**
**ಆಕಾಶದಲ್ಲಿ ಚಂದ್ರಮ್!**
**ಭೂಮೀಲಿ ಹೂವಮ್ಮ! ಮೇಲೆ ನೋದೇ ಹೂವಿ....!** **[ದೃಶ್ಯ-8 ]**

**ಪ್ರಶ್ನೆಗಳು:**

1. ಹೂವಿಯನ್ನು ತನ್ನಣ್ಣನಿಗೆ ಮದುವೆ ಮಾಡಿಕೊಡಿರೆಂದು ಬೆಳ್ಳಿ ಯಾರನ್ನು ಕೇಳಿದಳು? **[2]**
2. ಹೊನ್ನನು ಹೂವಿಯನ್ನು ಏನೆಂದು ವರ್ಣಿಸಿದ್ದಾನೆ? ವಿವರಿಸಿ. **[2]**

3. ಬೆಳ್ಳಿ ಹೂವಮ್ಮನ ಬಳಿ ಬಂದು ಹೆಣ್ಣು ಕೇಳಿದಾಗ ಹೂವಮ್ಮನ ತಾಯಿ ಏನೆಂದು ಹೇಳಿದಳು? ಅದಕ್ಕೆ ಬೆಳ್ಳಿಯ ಉತ್ತರವೇನು? **[3]**

4. ಹೂವಿ ಮರವಾಗುವ ವಿಷಯ ಹೊನ್ನನಿಗೆ ಗೊತ್ತೆಂದು ಹೇಳಿದ ಸಂದರ್ಭವನ್ನು ವಿವರಿಸಿ. **[3]**

**Question 16**

**ಜೋಕಾಲಿ ಜೀಗೋಣ! ಬೇಸರ ನೂಕೋಣ!**

**ಮೋಡವ ತಾಕೋಣ! ಗೆಳತೀ!!** **[ದೃಶ್ಯ-10]**

**ಪ್ರಶ್ನೆಗಳು:**

1. "ನಾದಿನೀ ನನ್ನ ಮೇಲೆ ಕರುಣೆ ಇಡೆ, ಕೊಂದರೆ ಪೂರ ನೀ ಕೊಂದು ಬಿಡೆ" **[2]**
2. ಬೆಳ್ಳಿಯು ಹೂವಿಯನ್ನು ಹೊನ್ನೆ ತೋಪಿಗೆ ಕರೆದುಕೊಂಡು ಹೋದ ಉದ್ದೇಶವೇನು?ವಿವರಿಸಿ. **[2]**
3. ಜೋಕಾಲಿ ಆಡಿದ ಮೇಲೆ ಬೆಳ್ಳಿ ಹಾಗೂ ಅವಳ ಗೆಳತಿಯರು ಹೂವಿಯನ್ನು ಏನೆಂದು ಕೇಳಿಕೊಂಡಳು? **[3]**
4. ಹೂವಿ ಹೂಮರವಾಗಿ ಪರಿಭ್ರಮಿಸಿದ ಮೇಲೆ ಏನೆಂದು ಕೇಳಿಕೊಳ್ಳುತ್ತಾಳೆ? ಅದಕ್ಕೆ ಬೆಳ್ಳಿಯ ಉತ್ತರವೇನು? **[3]**

*******